# ಗಜೇಂದ್ರಗಡದ ಕೋಟೆ



**ಈಗಲೂ ಘೋರ್ಪಡೆ ರಾಜರ ದೊಡ್ಡ ವಾಡೆ ಬೆಟ್ಟದ ಕೆಳಗೆ ಇದ್ದು ಅವರ ವಂಶಸ್ಥರು ಅಲ್ಲಿದ್ದರೂ ವಾಡೆ ಸುಸ್ಥಿತಿಯಲ್ಲಿಲ್ಲ. ವಾಡೆಯ ಒಂದು ಕಡೆಗೆ ಸೇವಕರ ವಾಸದ ಮನೆಗಳು, ಕುದುರೆ ಲಾಯ, ಧಾನ್ಯಗಳ ಸಂಗ್ರಹಕ್ಕೆ ಹಗೇವು ಮುಂತಾದವು ಇದ್ದು ಅವೆಲ್ಲವೂ ಜೀರ್ಣಾವಸ್ಥೆಯಲ್ಲಿವೆ.**

ಚಿತ್ರ– ಲೇಖನ:
**ಶೇಖರಗೌಡ ವೀ ಸರನಾಡಗೌಡರ್**



ಗದಗ್ ಜಿಲ್ಲೆಯಲ್ಲಿ ಹೊಸದಾಗಿ ತಾಲೂಕು ಕೇಂದ್ರವಾಗಿರುವ ಗಜೇಂದ್ರಗಡ (ಗಡಾ) ಪಟ್ಟಣದ ಉತ್ತರ ದಿಕ್ಕಿನ ಮೈಯನ್ನು ಸುತ್ತುವರಿದಿರುವ ಗಿರಿಶ್ರೇಣಿಯ ನಯನ ಮನೋಹರ ದೃಶ್ಯವನ್ನು ಸವಿಯಬೇಕೆಂಬುದು ನನ್ನ ಬಹು ವರ್ಷಗಳ ಆಸೆಯಾಗಿತ್ತು. 1972ರಿಂದ ವಿದ್ಯಾಭ್ಯಾಸಕ್ಕಾಗಿ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ನಮ್ಮೂರು ತಾವರಗೇರಿಯಿಂದ ಗಜೇಂದ್ರಗಡದ ಮಾರ್ಗವಾಗಿ ಬಸ್ಸಿನಲ್ಲಿ ಪಯಣಿಸುತ್ತಿದ್ದಾಗಿನಿಂದಲೇ ಗಜೇಂದ್ರಗಡ ಗುಡ್ಡದ ಬಗ್ಗೆ ಏನೋ ಒಂಥರ ಅರಿಯದ ಆಕರ್ಷಣೆ. 2001ರಲ್ಲಿ ನಾನು ಕುಷ್ಟಗಿಯಲ್ಲಿ ಬ್ಯಾಂಕ್ ಸರ್ವೀಸ್‌ನಲ್ಲಿದ್ದಾಗ ಚಾರಣ ಮಾಡಬೇಕೆಂದೆ. ಆಗಲೂ ಆಗಲಿಲ್ಲ. ಅದನ್ನು ಏರುವ, ಮನದಣಿಯೆ ನೋಡುವ ಯೋಗಾಯೋಗ ಬಂದದ್ದು ಮೊನ್ನೆಯಷ್ಟೇ ಅರವತ್ನಾಲ್ಕನೇ ವಯಸ್ಸಿನಲ್ಲಿ!

ನಾನು, ನನ್ನಂತೆ ನಿವೃತ್ತ ಬ್ಯಾಂಕ್ ಅಧಿಕಾರಿ ವಾಸುದೇವನ್ ಅಯ್ಯರ್ ನಮ್ಮೂರು ತಾವರಗೇರಾದಿಂದ ಬೆಳಿಗ್ಗೆ ಗಜೇಂದ್ರಗಡದತ್ತ ಪ್ರಯಾಣ ಆರಂಬಿಸಿದೆವು. ಎಂಟು ಗಂಟೆಗೆಲ್ಲ ಗಡಾದ ಉಡುಪಿಯ ಪುಷ್ಪಾ ಹೋಟೇಲಿನಲ್ಲಿದ್ದೆವು. ಬೆಟ್ಟ ಏರುವುದಕ್ಕೆ ನಮ್ಮ ಉದರಕ್ಕೆ ಇಂಧನ ಬೇಕಿತ್ತಲ್ಲವೇ? ಅಗಲೇ ಬೆಳಗಿನ ವಾಯುವಿಹಾರವನ್ನು ಮುಗಿಸಿಕೊಂಡು ಚಹ ಹೀರುತ್ತಿದ್ದ ಗಜೇಂದ್ರಗಡದ ನಾಗರೀಕರ ಜೊತೆಗೆ ನಾವು ಮುಂದಿನ ಮಾಗದರ್ಶನಕ್ಕಾಗಿ ಕೇಳಿಕೊಂಡಾಗ ನಮಗೆ ಗೊತ್ತಾಗಿದ್ದುದು ಬೆಟ್ಟದ ಮೇಲೆ ಘೋರ್ಪಡೆ ರಾಜರ ಕೋಟೆ, ಕೆಳಗೆ ಅವರ ವಾಡೆಯೂ ಇವೆ ಎಂಬುದು. ಅವರಿಂದ ಸೂಕ್ತ ಮಾರ್ಗದರ್ಶನವೂ ಸಿಕ್ಕಿತು. ಲಘು ಉಪಹಾರ ಮುಗಿಯುತ್ತಲೇ ನಮ್ಮ ವಾಹನ ಕೋಟೆಯತ್ತ ಚಲಿಸಿತು.

ಬೆಟ್ಟದ ಪದತಲ ಮುಟ್ಟಿ ನೋಡುತ್ತಿದ್ದಂತೆ ಒಂದು ರೀತಿಯ ಮಹದಾನಂದದ ಕುಳಿರ್ಗಾಳಿ ಸುಳಿದ ಅನುಭವ ನಮ್ಮೆದೆಯೊಳಗೆ. ಬೆಟ್ಟ, ಬೆಟ್ಟದ ಮೇಲೆ ಹಸಿರು ಕುರುಚಲು ಗಿಡಗಂಟಿಗಳ ಜೊತೆಗೆ ಕೋಟೆ. ಸುಮಾರು ಆರೇಳು ನೂರು ಮೆಟ್ಟಿಲುಗಳಿವೆ ಮೇಲೇರಲು. ಕಡಿದಾದ ಮೆಟ್ಟಿಲುಗಳು. ಮೇಲೇರಲು ನಮ್ಮಿಂದ ಸಾಧ್ಯವೇ ಎಂಬ ಅನುಮಾನದ ಎಳೆಯೂ ಸರಿದು ಹೋಯಿತು ಮನದಲ್ಲಿ. ಏಕೆಂದರೆ ನಾನೋ ಅಸ್ಥಮ್ಯಾಟಿಕ್ ಮತ್ತು ಹೃದ್ರೋಗಿ. ಭಂಡ ಧೈರ್ಯಮಾಡಿ ಮನದಲ್ಲೇ ಭೂದೇವಿಗೆ ನಮಿಸುತ್ತ ಮೇಲೇರಲು ಶುರುಮಾಡಿದೆವು. ಮೆಟ್ಟಿಲುಗಳೆಂದರೆ ಚಿಕ್ಕಚಿಕ್ಕ ಮೆಟ್ಟಿಲುಗಳಲ್ಲ. ಒಂದು ಅಡಿ, ಕೆಲವೊಂದು ಕಡೆಗೆ ಒಂದೂವರೆಯಿಂದ ಎರಡು ಅಡಿ ಎತ್ತರಗಳ ಮೆಟ್ಟಿಲುಗಳವು. ಬೆಟ್ಟ ಏರಿ ಕೆಳಗಿಳಿಯುವವರೆಗೂ. ಮೋಡ ಮುಸುಕಿದ ವಾತಾವರಣದಿಂದ, ಸೂರ್ಯದೇವನ ಪ್ರಖರತೆ ಇಲ್ಲದ್ದು ವರದಾನವಾಗಿತ್ತು.

ಅಲ್ಲಿ ಇಲ್ಲಿ ಮಧ್ಯದಲ್ಲಿ ಲಘು ವಿಶ್ರಾಂತಿ ಪಡೆಯುತ್ತ ಅಂತೂ ಯಾವುದೇ ತೊಂದರೆ ಇಲ್ಲದೇ ಕೋಟೆಯ ಮುಖ್ಯದ್ವಾರದಲ್ಲಿ ಬಂದು ನಿಂತಾಗ ಅದರ ವೈಭವದ ಸೊಬಗಿಗೆ ಬೆರಗಾಗಿ ನಿಂತೆವು. ಚಾರಣದ ದಣಿವು, ಆಯಾಸ ಕ್ಷಣಾರ್ಧದಲ್ಲಿ ಮಾಯವಾಗಿತ್ತು. ಮುಖ್ಯ ದ್ವಾರದ ಮೂಲಕ ಒಳಗೆ ಹೋಗುತ್ತಿದ್ದಂತೆಯೇ ಅದರ ಬಲಕ್ಕೆ ಒಂದು ವೀಕ್ಷಣಾ ಗೋಪುರವಿದ್ದು ಅಲ್ಲಿಂದ ಕೆಳಗೆ ಕಾಣುವ ಗಜೇಂದ್ರಗಡ ಪಟ್ಟಣ ಮತ್ತು ಕೋಟೆಯ ಸರಣಿಯ ದೃಶ್ಯಗಳು ನೋಡುಗರ ಮನಕ್ಕೆ ಲಗ್ಗೆ ಇಡುತ್ತವೆ. ಕೋಟೆಯ ಮೇಲೆ ಸುತ್ತಾಡಿದಂತೆ ಸುಮಾರು 50 ಅಡಿ ಅಗಲ, 150 ಅಡಿ ಉದ್ದ ಮತ್ತು 20 ಅಡಿಗಳಷ್ಟು ಆಳದ, ರಾಣಿವಾಸದವರ ಸ್ನಾನಕ್ಕೆ ಮೀಸಲಾಗಿದ್ದ ಪುಷ್ಕರಣಿ ರೀತಿಯ ಈಜುಗೊಳ ಇದೆ.

ಕೋಟೆಯ ಮೇಲೆ ಪವನ ವಿದ್ಯುತ್ ಕಂಪನಿಯೊಂದು ಗಾಳಿಯಂತ್ರ ಹಾಕಿಕೊಂಡಿದೆ. ಕೋಟೆಯ ಈಶಾನ್ಯ ದಿಕ್ಕಿನಲ್ಲಿ ದೊಡ್ಡದೊಂದು ಕೆರೆ, ವಾಯವ್ಯ ದಿಕ್ಕಿನಲ್ಲಿ ಬೆಟ್ಟದ ಸರಣಿಯಲ್ಲಿನ ಕಾಲಕಾಲೇಶ್ವರ ದೇವಸ್ಥಾನವಿದೆ. ಪೂರ್ವಕ್ಕೆ ಹಸಿರು ಹಾಸಿನ ಹೊಲಗಳಿವೆ. ಮನಸ್ವೀ ಎರಡು ತಾಸುಗಳವರೆಗೆ ಕೋಟೆಯ ಮೇಲೆ ಸುತ್ತಾಡಿ ಖುಷಿಯ ಪರಾಕಾಷ್ಠೆ ಅನುಭವಿಸಿ ಕೆಳಗಿಳಿದು ಬಂದಾಗ ಅಲ್ಲಿಯವರೆಗೆ ತಂಬೆಲರಿನಿಂದ ನಮ್ಮನ್ನು ಹರಸಿದ್ದ ಮೇಘರಾಜ ದೂರ ಸರಿದು ಸೂರ್ಯದೇವನಿಗೆ ದಾರಿ ಮಾಡಿಕೊಟ್ಟಿದ್ದ.

ಈ ಗಜೇಂದ್ರಗಡ ಕೋಟೆಯು ಛತ್ರಪತಿ ಶಿವಾಜಿ ಮಹಾರಾಜರಿಂದ ನಿರ್ಮಾಣಗೊಂಡಿದೆ ಮತ್ತು ನವೀಕರಣಗೊಂಡಿದೆ ಎಂಬ ಮಾಹಿತಿ ಅಂತರ್ಜಾಲದಲ್ಲಿ ಲಭ್ಯವಿದೆ. ಹದಿನಾರನೇ ಶತಮಾನದಲ್ಲಿ